794(1035) ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಧಾರವಾಡ ಜಿಲ್ಲೆಯಲ್ಲಿ ಅಂಗವಿಕಲರ ವಿಧವೆಯರ ಮತ್ತು ವೃದ್ಧಾಪ್ಯದ ಮಾಸಾಶನ ಬಯಸಿ ಬಂದಿರುವ ಅರ್ಜಿಗಳು ಎಷ್ಟು (ತಾಲ್ಲೂಕುವಾರು ವಿವರ ನೀಡುವುದು),

ಆ) ಕಳೆದ ಒಂದು ವರ್ಷದ ಹಿಂದೆಯೇ ಈ ಬಗ್ಗೆ ಅರ್ಜಿ ಸಲ್ಲಿಸಿದರೂ ಮಾಸಾಶನ ಸಿಗದೆ ಇದ್ದು, ನಿರ್ಗತಿಕರು ಅಲೆದಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಕಳೆದ ಒಂದು ವರ್ಷದಲ್ಲಿ ಮಾಸಾಶನ ಮಂಜೂರು ಮಾಡಿದ ಅರ್ಜಿಗಳ ಸಂಖ್ಯೆ ಎಷ್ಟು , (ತಾಲ್ಲೂಕುವಾರು ವಿವರ ನೀಡುವುದು)

ಈ) ಮಾಸಾಶನ ಮಂಜೂರು ಮಾಡುವ ಪ್ರಕ್ರಿಯೆ ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆಯೇ, ಹಾಗಿಲ್ಲವಾದರೆ ಕಾರಣಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಧಾರವಾಡ ಜಿಲ್ಲೆಯಲ್ಲಿ ಅಂಗವಿಕಲರ ವಿಧವೆಯರ ಮತ್ತು ವೃದ್ಧಾಪ್ಯದ ಮಾಸಾಶನ ಬಯಸಿ ಬಂದಿರುವ ಅರ್ಜಿಗಳು ಒಟ್ಟು 16076 ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ,

ಅ ನಂ	ತಾಲ್ಲೂಕು	ಅಂಗವಿಕಲ	ವಿಧವಾ	ವೃದ್ಧಾಪ್ಯ
1	ಧಾರವಾಡ	1391	2037	1396
2	ಹುಬ್ಬಳ್ಳಿ	954	2165	1107
3	ಕಲಘಟಗಿ	672	1046	2681
4	ನವಲಗುಂದ	411	553	644
5	ಕುಂದಗೋಳ	456	346	217
	ಒಟ್ಟು	3884	6147	6054

ಆ) ಇಂತಹ ಪ್ರಕರಣಗಳು ಯಾವುದು ಇರುವುದಿಲ್ಲ ಮೇಲೆ ಸೂಚಿಸಿದ ಅರ್ಜಿಗಳಲ್ಲಿ ನಿಯಮಾನುಸಾರ ಅರ್ಹರಿದ್ದವರಿಗೆ ನಿಗದಿತ ಅವಧಿಯಲ್ಲಿ ಮಾಸಾಶನ ಮಾಡಲಾಗಿದೆ

ಇ) ಕಳೆದ ಒಂದು ವರ್ಷದಲ್ಲಿ ಮಾಸಾಶನ ಮಂಜೂರು ಮಾಡಿದ ಒಟ್ಟು ಅರ್ಜಿಗಳ ಸಂಖ್ಯೆ 7739

ಅ ನಂ	ತಾಲ್ಲೂಕು	ಅಂಗವಿಕಲ	ವಿಧವಾ	ವೃದ್ಧಾಪ್ಯ
1	ಧಾರವಾಡ	740	1008	455
2	ಹುಬ್ಬಳ್ಳಿ	369	335	663
3	ಕಲಘಟಗಿ	496	880	1594
4	ನವಲಗುಂದ	237	257	239
5	ಕುಂದಗೋಳ	228	153	85
	ಒಟ್ಟು	**2070**	**2633**	**3036**

ಈ) ಧಾರವಾಡ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

814(1033) ಶ್ರೀ ಮೋಹನ್‌ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಳೆ ಹಾನಿಗೆ ಪರಿಹಾರ ನೀಡುವಾಗ ಉತ್ತರ ಕನ್ನಡದ ತುಂಡು ಭೂಮಿ ಹೊಂದಿರುವ ರೈತರಿಗೆ ಅತೀ ಕನಿಷ್ಠ ಪ್ರಮಾಣದ ಪರಿಹಾರ ದೊರಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಯಲು ಸೀಮೆಯ ಜಿಲ್ಲೆಗಳಿಗೆ ಹೋಲಿಸಿದರೆ ಈ ಜಿಲ್ಲೆಗಳಲ್ಲಿ ರೈತರು ಅನೇಕ ಹೆಕ್ಟೇರುಗಟ್ಟಲೆ ವಿಸ್ತಾರವಾದ ಭೂಮಿ ಹೊಂದಿದ್ದು ಉತ್ತರ ಕನ್ನಡದಲ್ಲಿ ಚಿಕ್ಕ ಅತಿಚಿಕ್ಕ ಹಿಡುವಳಿದಾರರೇ ಹೆಚ್ಚಿದ್ದು ಇಲ್ಲಿ ಬೆಳೆ ಹಾನಿಗೆ ನೀಡುವ ಪರಿಹಾರದ ಮಾನದಂಡ ಬದಲಾಯಿಸಿ ರೈತರಿಗೆ ಹೆಚ್ಚಿನ ಪರಿಹಾರ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ,

ಇ) ಸರ್ಕಾರ ಮನಗಂಡಿದ್ದರೆ ಯಾವ ಕ್ರಮ ಕೈಗೊಳ್ಳಲಾಗುವುದು, ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಇಲ್ಲ

ಆ) ಹೆಚ್ಚಿನ ಪರಿಹಾರ ನೀಡಲು ಅವಕಾಶ ಇರುವುದಿಲ್ಲ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇಕಡ 50%ಕ್ಕಿಂತ ಹೆಚ್ಚಿನ ಬೆಳೆಹಾನಿಗೆ ಈ ಕೆಳಕಂಡಂತೆ ಪರಿಹಾರ ನೀಡಲಾಗುತ್ತಿದೆ

ಮಳೆ ಆಧಾರಿತ ಬೆಳೆ ಪ್ರತಿ ಹೆಕ್ಟೇರಿಗೆ	ರೂ	2000
ನೀರಾವರಿ ಬೆಳೆ ಪ್ರತಿ ಹೆಕ್ಟೇರಿಗೆ	ರೂ	4000
ವಾರ್ಷಿಕ ಬೆಳೆ ಪ್ರತಿ ಹೆಕ್ಟೇರಿಗೆ	ರೂ	6000

ಇ) ಕೇಂದ್ರ ಸರ್ಕಾರವು ದಿನಾಂಕ 27 6 2007 ರಿಂದ ಬೆಳೆ ಪರಿಹಾರವನ್ನು ದ್ವಿಗುಣಗೊಳಿಸಿದೆ ಅದರಂತೆ ಪರಿಹಾರ ನೀಡಲಾಗುತ್ತಿದೆ